★★★

ಅದು ಡಿಸೆಂಬರ್ ತಿಂಗಳು. ಮೈ ನಡುಗಿಸುವ ಚಳಿಯ ದಿನಗಳವು. ವಿರಾಜಪೇಟೆಯ ಕಾಫಿ ತೋಟಗಳಲ್ಲಿ ಮುಂಜಾನೆ ಮರಗಳ ಎಲೆಗಳಿಂದ ಬೀಳುವ ಹನಿಗಳನ್ನು ನೋಡುವುದೇ ಚಂದ. ಒಂದು ದಿನ ಸಂಜೆಗೆ ನಮ್ಮನ್ನು ಕಾಣಲು ಒಬ್ಬ ಅಪರಿಚಿತ ಆಗಮಿಸಿದ್ದ. ತನ್ನನ್ನು ನಾಳಿಯಂಡ ಸೋಮಯ್ಯ ಎಂದು ಆತ ಪರಿಚಯಿಸಿಕೊಂಡ. ಆತನ ಕೀರಲು ದನಿ ಕೇಳಲು ಹಿತವಾಗಿರಲಿಲ್ಲ. ಎತ್ತರದ ನಿಲುವು, ಸಣಕಲು ಶರೀರ, ದೊಡ್ಡದಾದ ನಾಸಿಕ, ಚಿಕ್ಕ ಕಣ್ಣುಗಳು, ಐವತ್ತರ ಆಸುಪಾಸಿನ ಆಸಾಮಿ.

"ನಿಮ್ಮಿಂದ ಒಂದು ಉಪಕಾರವಾಗಬೇಕಿತ್ತು. ಇದು ನನ್ನ ಆಪ್ತ ಮಿತ್ರ ತಾಪಂಡ ಮೋಹಿತನಿಗೆ ಸಂಬಂಧಿಸಿದ್ದು..."

ಓವರ್ ಕೋಟನ್ನು ಎಳೆದುಕೊಂಡು, ಆತ ನಾಟಕೀಯವಾಗಿ ಪ್ರವರ ಆರಂಭಿಸಿ, ನನ್ನತ್ತ ಅನುಮಾನದ ನೋಟ ಬೀರಿದ. ಆತನ ಅಂತರಂಗ ಅರಿತ, ಕರಮಚಂದ ಹೇಳಿದ,

"ಇವ್ನು ನನ್ನ ಆಪ್ತ ಸಹಾಯಕ ಪ್ರಸಾದ್ ಬಿದ್ದಪ್ಪ. ನಿಸ್ಸಂಕೋಚವಾಗಿ ನಿಮ್ಮ ಮಾತು ಹೇಳಬಹುದು."

ಸೋಮಯ್ಯ ನಸುನಗು ಬೀರಿ, ಮುಂದುವರೆಸಿದ,

"ನಿನ್ನೆ ಸಂಜೆಯಿಂದ ಮೋಹಿತ ಏಕಾಏಕಿ ನಾಪತ್ತೆಯಾಗಿದಾನೆ, ಸಂಶಯಾಸ್ಪದವಾದ ಸನ್ನಿವೇಶದಲ್ಲಿ! ಇಲ್ಲಿಂದ ಹದಿನೈದು ಮೈಲಿ ದೂರದಲ್ಲಿರೋ ನಾಪೋಕ್ಲುವಿನ ಸಮೀಪ ಆತನ ಮನೆ. ಈಗ ಆತ ಎಲ್ಲಿ ಇದ್ದಾನೆ ಎಂಬುದೇ ಗೊತ್ತಿಲ್ಲ! ಆತನ ಚರವಾಣಿ ಕೂಡ ಕೆಲವೊಮ್ಮೆ 'ನಾಟ್ ರೀಚೆಬಲ್' ಅನ್ನೋ ಸಂದೇಶ ನೀಡ್ತಾ ಇದೆ!!"

"ದಯಮಾಡಿ ಇಡೀ ಘಟನೆಯನ್ನು ನಡೆದ ಹಾಗೆಯೇ ವಿವರಿಸಿ"

"ನಿನ್ನೆ ಆತನ ಹುಟ್ಟಿದ ಹಬ್ಬ. ಅದನ್ನು ಆಚರಿಸಲು ಒಂದು ಪಾರ್ಟಿ ಇಟ್ಟುಕೊಂಡಿದ್ದ. ಇದ್ದಿದ್ದು ನಾವು ಕೇವಲ ನಾಲ್ಕು ಮಂದಿ. ಮೋಹಿತ, ಆತನ ಪತ್ನಿ ವರ್ಷಿಣಿ, ನಾನು ಮತ್ತು ಅವರ ಇನ್ನೊಬ್ಬ ಮಿತ್ರ ಉದ್ದಪಂಡ ಚೆಂಗಪ್ಪ. ಸುಮಾರು ಆರು ಗಂಟೆಯ ಹೊತ್ತಿಗೆ ನಾವು ಆತನ ಮನೆಯಿಂದ ಹೊರಟೆವು. ಮಡಿಕೇರಿ ಭಾಗಮಂಡಲ ರಾಜ್ಯ ಹೆದ್ದಾರಿಯಲ್ಲಿ, ತುಸು ಎತ್ತರದ ಜಾಗದಲ್ಲಿ ಆತನ ಮನೆ. ಮುಖ್ಯ ರಸ್ತೆಯಿಂದ ಒಂದು ಮಣ್ಣಿನ ರಸ್ತೆಯು ಗುಡ್ಡದಲ್ಲಿ ಸಾಗಿ, ಆತನ ಮನೆಗೆ ಸಂಪರ್ಕ ಒದಗಿಸುತ್ತೆ. ಆ ರಸ್ತೆ ಮುಂದುವರೆದು, ಕಡಿದಾದ ಪ್ರಪಾತದ ಬಳಿ ಅಂತ್ಯವಾಗುತ್ತೆ. ಆ ಜಾಗದಲ್ಲಿ ಇರೋದು ಆತನ ಒಂದು ಮನೆ ಮಾತ್ರ. ನಾವು ಹೊರಟಿದ್ದು ಸುಮಾರು ಒಂದು ಕಿಲೋ ಮೀಟರ್ ದೂರದಲ್ಲಿರೋ ಕೂರ್ಗ್ ಇನ್ ಎಂಬ ಹೋಟೆಲಿಗೆ. ಸಂಜೆಯ ತಣ್ಣನೆಯ ಆಹ್ಲಾದಕರ ವಾತಾವರಣ. ವಾಹನ ಬೇಡ ಎಂದು ನಾವು ನಡೆದೇ ಹೊರಟೆವು..."

ನಮ್ಮ ಅತಿಥಿ ಒಮ್ಮೆ ಮಾತು ನಿಲ್ಲಿಸಿ, ನೀರು ಗುಟುಕರಿಸಿ, ಮತ್ತೆ ಪದ ಜೋಡಿಸಿದ,

"ಚೆಂಗಪ್ಪ ಮತ್ತು ವರ್ಷಿಣಿ ಮುಂದೆ ಹೆಜ್ಜೆ ಹಾಕುತ್ತಿದ್ದರು. ಹಿಂದಿನಿಂದ ನಾನು ಮತ್ತು ಮೋಹಿತ್. ನಾವು ಕೊಂಚ ದೂರ ಸವೆಸಿರಬೇಕಷ್ಟೆ. ಆಗ ಒಮ್ಮೆಗೇ ಹಿಂದೆ ತಿರುಗಿದ ವರ್ಷಿಣಿಯು ಮೋಹಿತನೊಡನೆ, "ನೀನು ಏನೋ ಮರೆತುಬಂದಿದ್ದೀಯಾ? ಪರ್ಸು ಇದೆ ತಾನೆ?" ಎಂದು ವಿಚಾರಿಸಿದಳು. ಆತ ಜೇಬು ಮುಟ್ಟಿ ಓಹ್ ಎಂದ! ಕೂಡಲೇ ತರುತ್ತೇನೆ ಅಂತ